**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**
**ಸಿಸಿ ನಂ.187/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿರುಃ ನಾಗರೆಡ್ಡಿ ತಂದೆ ಶ್ರೀಶೈಲರೆಡ್ಡಿ
ವಃ 31 ವರ್ಷ, ಉಃ ಪ್ರೈವೆಟ ಕೆಲಸ
ಸಾಃ ಬಟಗೇರಾ ಕೆ. ಗ್ರಾಮ, ತಾಃ ಸೇಡಂ

----

**ದೋ ಷಾ ರೋ ಪ ಣೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 08-01-2021ರಂದು 08-30 ಪಿ.ಎಮ್. ಗಂಟೆ ಸುಮಾರಿಗೆ ಸೇಡಂ ಪೊಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಬಟಗೇರಾ ಕೆ. ಗ್ರಾಮದಿಂದ ಚಾಸಾ 1 ನೇದ್ದವರು ಮೋಟರ ಸೈಕಲ ಮೇಲೆ ಬರುತ್ತಿರುವಾಗ ಗೇಟ ಹತ್ತಿರ ಆರೋಪಿತನು ಚಾಸಾ.1 ನೇಯವನಿಗೆ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 341 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ಬಂದಿರುವುದು ಇರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಚಾಸಾ 1 ನೇದ್ದವರಿಗೆ ತಡೆದು ನಿಲ್ಲಿಸಿ ಗ್ರಾಮ ಪಂಚಾಯತ ಎಲೆಕ್ಷನನಲ್ಲಿ ಚಾಸಾ.1 ರವರ ತಾಯಿ ಸೋತ್ತಿದ್ದರ ವೈಶ್ಯಮ್ಯದಿಂದ ಆರೋಪಿತನು ಜಗಳ ತೆಗೆದು ಚಾಸಾ.1ನೇದ್ದವನ ಎದೆ ಮೇಲಿನ ಅಂಗಿ ಹಿಡಿದೆಳೆದು, ಕೈಯಿಂದ ಹೊಟ್ಟೆಗೆ ಕಪಾಳಕ್ಕೆ ಹಣೆಯ ಎಡಭಾಗಕ್ಕೆ ಹೊಡೆದಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 323 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ಬಂದಿರುವುದು ಇರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಚಾಸಾ 1 ರವರಿಗೆ ಏ ಬೋಸಡಿ ಮಗನೇ ನಮ್ಮ ವಿರುದ್ಧ ರಾಜಕೀಯ ಮಾಡ್ತೀ ಸೂಳ್ಯಾಮಗನೇ ನಿನ್ನ ತಾಯಿಗೆ ಹ್ಯಾಂಗ ಸೋಲಿಸಿವಿ ನಿ ದಿಮಾಕ ಮಾಡಬೇಡ ರಂಡಿಮಗನಾ ನೀವ್ಯಾರು ನಮಗೆ ಏನು ಮಾಡಲ್ಲ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಚಾಸಾ 1

ನೇದ್ದವರೊಡನೆ  ಜಗಳ ತೆಗೆದು ಹೊಡೆ ಬಡೆ ಮಾಡಿ ಮತ್ತು ಮುಂದೆ ಸಿಗು ನಿನಗೆ ಖಲಾಸ ಮಾಡುತ್ತೇನೆಂದು ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 506ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 04-06-2025 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**
**ಸಿಸಿ ನಂ.187/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿತರುಃ ನಾಗರೆಡ್ಡಿ ತಂದೆ ಶ್ರೀಶೈಲರೆಡ್ಡಿ
ವಃ 31 ವರ್ಷ, ಉಃ ಪ್ರೈವೆಟ ಕೆಲಸ
ಸಾಃ ಬಟಗೇರಾ ಕೆ. ಗ್ರಾಮ, ತಾಃ ಸೇಡಂ

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ-

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 04-06-2025 ಪ್ರ.ದ.ನ್ಯಾ.ದಂ. ಸೇಡಂ.